| |
|---|
| **Deposition Sheets (RP.No.57)** |
| **Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1247/2023**

ಪಿ.ಡಬ್ಲ್ಯು : 5 ಸಿ.ಡಬ್ಲ್ಯು : 6

| | | |
|---|---|---|
| ಸಾಕ್ಷಿದಾರನ ಹೆಸರು | : | ಸತೀಶ್ ಪೂಜಾರಿ |
| ತಂದೆಯ ಹೆಸರು | : | ಜಯ ಪೂಜಾರಿ |
| ಪ್ರಾಯ | : | 52 ವರ್ಷ |
| ಉದ್ಯೋಗ | : | ಕೃಷಿ |
| ವಾಸ | : | ಕುಂಟಾಡಿ ಕಲ್ಯಾ |

ದಿನಾಂಕ 05-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನನಗೆ ಚಾಸಾ-1 ರವರ ಪರಿಚಯ ಇದೆ. ಅವರು ನನ್ನ ನೆರೆಕರೆ.

ಸುಮಾರು 5-6 ವರ್ಷಗಳ ಹಿಂದೆ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿದೆ ಎಂದು ತಿಳಿದು ನಾನು ಅವರ ಮನೆಯ ಬಳಿ ಹೋಗಿದ್ದೆ ಆಗ ಪೋಲಿಸರು ಮಹಜರಿಗೆ ಸಾಕ್ಷಿಯಾಗಿ ಬರಲು ಹೇಳಿರುತ್ತಾರೆ. ಆ ಸಮಯದಲ್ಲಿ ಚಾಸಾ-7 ರವರು ಕೂಡಾ ಇದ್ದರು. ನಂತರ ಪೋಲಿಸರು ಚಾಸಾ-1 ರವರ ಮನೆಯಲ್ಲಿ ಅಂದಾಜು ಸಂಜೆ 7.00 ಗಂಟೆಗೆ ತಕ್ಷೀರು ಸ್ಥಳದ ಮಹಜರು ಮಾಡಿ, ನಕಾಶೆ ಮಾಡಿ, ತಕ್ಷೀರಿಗೆ ಸಂಬಂಧಿಸಿದ ಚಿಲಕದ ಕೊಂಡಿ, ಕೊಂಡಿ ತುಂಡಾಗಿ ಬಿದಿದ್ದ ಕೊಂಡಿಯ ಎರಡು ಮೊಳೆಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ನಂತರ ಮಹಜರಿಗೆ ಹಾಗೂ ನಕಾಶೆಗೆ ನನ್ನ ಹಾಗೂ ಚಾಸಾ-7 ರವರ ಸಹಿಯನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿಯು ಸ್ಥಳ ಮಹಜರು, ನಕಾಶೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸ್ಸಿದ್ದು, ಮಹಜರನ್ನು ಈಗಾಗಲೇ ನಿಪಿ-2 ಎಂದು, ನಕಾಶೆಯನ್ನು ಈಗಾಗಲೇ

ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಹಾಗೂ ನಿಪಿ-3(ಬಿ) ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ಸೊತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಚಿಲಕದ ಕೊಂಡಿ, ಕೊಂಡಿ ತುಂಡಾಗಿ ಬಿದಿದ್ದ ಕೊಂಡಿಯ ಎರಡು ಮೊಳೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ಮತ್ತು ಮು.ಮಾ-2 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲು</u> : 2 ನೇ ಆರೋಪಿ ಪರ : ಶ್ರೀಮತಿ ವಿ.ಟಿ.ಬಿ. ವಕೀಲರಿಂದ ಃ

ನಿಪಿ-2 ಮಹಜರಿನಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಅದನ್ನು ಓದಿ ತಿಳಿದುಕೊಂಡಿರುವುದಿಲ್ಲ. ಪೋಲಿಸರು ಹೇಳಿದ ಮೇರೆಗೆ ನಿಪಿ-2 ಮತ್ತು ನಿಪಿ-3 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಮು.ಮಾ-1 ಮತ್ತು 2 ನ್ನು ಠಾಣೆಯಲ್ಲಿ ತೋರಿಸಿರುತ್ತಾರೆ ಎಂದರೆ ಚಾಸಾ-1 ರವರ ಮನೆಯಲ್ಲಿ ತೋರಿಸಿರುತ್ತಾರೆ. ಮು.ಮಾ-1 ಮತ್ತು 2 ಚಾಸಾ-1 ರವರ ಮನೆಗೆ ಸೇರಿದ್ದು ಎಂದುನಿಮಗೆ ಹೇಳಲು ಸಾಧ್ಯ ವಿಲ್ಲ ಎಂದರೆ ಸರಿ. ಚಾಸಾ -1 ಮತ್ತು ನಾನು ನೆರೆಕರೆಯವರಾಗಿದ್ದು ಆತ್ಮೀಯರಾಗಿರುತ್ತೇವೆ. ಅಗತ್ಯ ಸಂದರ್ಭಗಳಲ್ಲಿ ಪರಸ್ಪರ ಸಹಾಯ ಮಾಡುತ್ತೇವೆ ಎಂದರೆ ಸರಿ. ಪೋಲಿಸರು ಸ್ಥಳ ಮಹಜರಿಗೆ ಬಂದಿರುವುದಿಲ್ಲ ಹಾಗೂ ನನ್ನ ಹಾಗೂ ಚಾಸಾ-7 ರವರ ಸಮಕ್ಷಮ ಮಹಜರು ಮಾಡಿ, ನಕಾಶೆ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಗೆ ಸಹಾಯವಾಗಲಿ ಎಂದು ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ